ಮತ್ತು ಮುಕುಂದರನ್ನು ಎಷ್ಟು ಆಳವಾಗಿ ಕಲಕಿತ್ತೆಂದರೆ ನಂತರ ಮನೆ ತಲುಪುವ ತನಕವೂ ಅವರು ಒಂದು ಶಬ್ದವನ್ನೂ ಮಾತಾಡಲಿಲ್ಲ.

ಬೆಳಗಾವಿ ಅಂದರೆ ಮುಕುಂದರಿಗೆ ತುಂಬಾ ಅಚ್ಚೆ. ಅವರ ಧಾರವಾಡದ ಸಹಪಾಠಿ ಎಸ್.ಕೆ. ಕುಲಕರ್ಣಿ (ಅವರು ದೆಹಲಿಯಲ್ಲಿ ಕಾಯಿದೆ ತಜ್ಞರಾಗಿದ್ದರು. ಅವರನ್ನು ಮುಕುಂದರ ಮಕ್ಕಳು ವಕೀಲ ಕಾಕಾ ಅಂತ ಹೆಮ್ಮೆಯಿಂದ ಕರೀತಿದ್ದರು) ಮತ್ತು ನಿಡುಗಾಲದ ಬಾಲ್ಯ ಕಾಲ ದೋಸ್ತರಾದ ಪಿ.ಎಚ್. ಜೋಷಿ, ವಿಲಾಸ್ ಗದಗಕರ್, ಶ್ರೀಕಾಂತ ಮಂಗಳವೇಢೆ, ಎಸ್.ಎನ್. ಕುಲಕರ್ಣಿ ಬಗ್ಗೆ ಮುಕುಂದ್‌ಗೆ ತುಂಬಾ ನಂಬಿಕೆ ಮತ್ತು ಮಾರ್ದವ. ಬೆಳಗಾವಿಯ ರೆಕ್ಸ್, ಕೃಷ್ಣ, ರೇಡಿಯೊ, ಗ್ಲೋಬ್–ಇತ್ಯಾದಿ ಟಾಕೀಸುಗಳೆಂದರೆ ಮಿಲಿಟ್ರಿ ಮಹಾದೇವದಷ್ಟೇ ಪೂಜ್ಯ ಸ್ಥಳಗಳು. ರೇಡಿಯೊದಲ್ಲಿ "ಜಬ್ ಪ್ಯಾರ ಕಿಸೀಸೆ ಹೋತಾ ಹೈ" – ಯಾವಾಗ ಬಂದಿತ್ತು, "ಸಂಗಮ್" – ಎಷ್ಟು ವಾರ ನಡೆದಿತ್ತು, ಕೃಷ್ಣಾದಲ್ಲಿ "ಬೇಟಿ ಬೇಟೆ" ನೋಡಿ ಹೇಗೆ ಜನಾ ಅಳಕೋತ ಹೊರಗೆ ಬರ್ತಿದ್ದರು – ಎಲ್ಲವನ್ನು ಹುಬೇಹೂಬ್ ಕಣ್ಣಿಗೆ ಕಟ್ಟುವಂತೆ ಹೇಳುತ್ತಿದ್ದರು. ಲಿಂಗರಾಜ ಕಾಲೇಜಿನಲ್ಲಿ ಕೆಲಕಾಲ ಎ.ಕೆ. ರಾಮಾನುಜನ್ ಪಾಠ ಮಾಡುತ್ತಿದ್ದುದನ್ನು ಅತೀವ



ಮುಕುಂದ ಮತ್ತು ಕೋಕಿಲಾ